ಸರ್ಕಾರದ ನೀತಿ ಇದೆ. 12 ವರ್ಷಗಳಿಗಿಂತಲೂ ಹೆಚ್ಚು ಖಾಸಗಿ ಜಮೀನನ್ನು ಸಾಗುವಳಿ ಮಾಡುತ್ತಿದ್ದರೆ ಅವರಿಗೆ ಖಾಯಂ ಹಕ್ಕು ಪತ್ರವನ್ನು ಕೊಡಬೇಕೆಂಬ ಸರ್ಕಾರದ ನೀತಿ ಇದೆ. ನಾನು ಅಕ್ರಮ ಸಕ್ರಮ ಸಮಿತಿಯ ಅಧ್ಯಕ್ಷನಾಗಿದ್ದರೂ ಕೂಡ, ಈ ಸರ್ಕಾರದ ನಿಲುವಿನಿಂದ ಅವರಿಗೆ ಖಾಯಂ ಸಾಗುವಳಿ ಪತ್ರವನ್ನು ಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲ, ಪರಿಹಾರವನ್ನೂ ಕೂಡ ಸರ್ಕಾರ ಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಆದ್ದರಿಂದ ಮಾನವೀಯತೆಯ ದೃಷ್ಟಿಯಿಂದ ಸರ್ಕಾರ ಎಲ್ಲಾ ವಿಚಾರಗಳನ್ನು ಪರಿಗಣನೆಗೆ ತೆಗೆದುಕೊಂಡು ಆ ವರ್ಗಕ್ಕೆ ನ್ಯಾಯವನ್ನು ಒದಗಿಸಿ ಈಗ ಏನು ಕೇಂದ್ರ ಸರ್ಕಾರದವರು ಡೆಪಾಸಿಟನ್ನು ಮಾಡಿದ್ದಾರೆ ಅದನ್ನು ರೈತರಿಗೆ ಪರಿಹಾರವನ್ನೂ ಕೊಡುವುದರ ಸಹಾಯಕ್ಕೆ ಬರಬೇಕು, ಬೀದಿ ಪಾಲಾಗಿರತಕ್ಕಂತಹ ಜನರ ರಕ್ಷಣೆಯನ್ನು ಸರ್ಕಾರ ಮಾಡಬೇಕು. ಇದರ ಬಗ್ಗೆ ಸ್ಪಷ್ಟ ಭರವಸೆಯನ್ನು ಸರ್ಕಾರ ಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ (ಸಾರಿಗೆ ಸಚಿವರು): ಮಾನ್ಯ ಅಧ್ಯಕ್ಷರೇ, ಹುಣಸೂರು ತಾಲ್ಲೂಕಿನ ಗ್ರಾಮದಲ್ಲಿ 135 ಎಕರೆ ಜಮೀನಿನ ವಿಚಾರದಲ್ಲಿ ರೈತರು ಬಗರ್ ಹುಕುಂ ಸಾಗುವಳಿಯನ್ನು ಮಾಡುತ್ತಿರುವುದರಿಂದಾಗಿ ಇನ್ನೂ ಹಕ್ಕು ಪತ್ರಗಳನ್ನು ಕೊಟ್ಟಿಲ್ಲ. ಕೇಂದ್ರ ಸರ್ಕಾರದವರು ಹಣವನ್ನು ಬಿಡುಗಡೆ ಮಾಡಿದ್ದಾರೆ ಆದರೂ ಸಹ ರಾಜ್ಯ ಸರ್ಕಾರದವರು ಹಣವನ್ನು ಕೊಡುವುದರಲ್ಲಿ ಅಡ್ಡಿ ಬಂದಿದ್ದಾರೆ ಎನ್ನುವಂತಹ ಮಾತನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಇದರ ಬಗ್ಗೆ ಸಂಬಂಧಪಟ್ಟಂತಹ ಜಿಲ್ಲಾಧಿಕಾರಿಗಳಿಂದ ವರದಿಯನ್ನು ತರಿಸಿಕೊಂಡು ಮಾನ್ಯ ಕಂದಾಯ ಸಚಿವರಿಂದ ಹಾಗೂ ಸರ್ಕಾರದ ವತಿಯಿಂದ ಆ ಪರಿಹಾರ ನ್ಯಾಯಬದ್ಧವಾಗಿ ಬರುವುದಿದ್ದರೆ ಕೊಡಿಸುವುದಕ್ಕೆ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇವೆ.

(ಈ) ವಿಷಯ: ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿ ಜವಳಿನಗರ ಸ್ಥಾಪನೆ,

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿಗ್ರಾಮಾಂತರ): ಮಾನ್ಯ ಅಧ್ಯಕ್ಷರೇ, ಹುಬ್ಬಳ್ಳಿ ಧಾರವಾಡ ಮಹಾನಗರದಲ್ಲಿ ಜವಳಿ ನಗರವನ್ನು ಸ್ಥಾಪನೆಯನ್ನು ಮಾಡಬೇಕೆಂದು ಹಿಂದೆ ಅಧಿಕಾರದಲ್ಲಿದ್ದ ಸರ್ಕಾರ ಕೂಡ ನಿರ್ಧಾರ ಮಾಡಿತ್ತು ಹಾಗೂ ಈಗಿನ ಸರ್ಕಾರ ಕೂಡ ನಿರ್ಧಾರವನ್ನು ಮಾಡಿದೆ, ಇದರ ಸುತ್ತಮುತ್ತಲಿನಲ್ಲಿರುವ ನಗರ ಪ್ರದೇಶಗಳು ಗದಗ್ ಇರಲಿ, ಬೈಲಹೊಂಗಲ ಇರಲಿ, ಗೋಕಾಕ್, ಸವದತ್ತಿ ಈ ಎಲ್ಲಾ ಕಡೆಗಳಲ್ಲಿಯೂ ಹತ್ತಿಯ ವ್ಯವಹಾರ ಏನಿದೆ ಅದು ಅತ್ಯಂತ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿದೆ. ಹೀಗಾಗಿ ಹುಬ್ಬಳ್ಳಿಯಲ್ಲಿ ಜವಳಿ ನಗರವನ್ನು ಸ್ಥಾಪನೆ ಮಾಡುವಂಥದ್ದು ಅತಿ ಅವಶ್ಯಕತೆ ಇದೆ. ಆದರೆ ಇತ್ತೀಚಿನ ಕೆಲವೊಂದು ವರದಿಗಳನ್ನು ನೋಡಿದಾಗ, ಇತ್ತೀಚಿನ ಕೆಲವು ವದಂತಿಗಳನ್ನು ಕೇಳಿದರೆ ಸರ್ಕಾರ ಏನು ಜವಳಿ ನಗರವನ್ನು ಸ್ಥಾಪನೆ ಮಾಡಬೇಕೆಂದು ನಿರ್ಧಾರ ಮಾಡಿತ್ತು ಅದನ್ನು ಕೈಬಿಡಲಾಗುತ್ತಿದೆ ಎನ್ನುವಂಥದ್ದು

ಬರುತ್ತಿದೆ. ಆದುದರಿಂದ ದಯವಿಟ್ಟು, ಸರ್ಕಾರ ಇದನ್ನು ಕೈಬಿಡಬಾರದು. ಜವಳಿ ನಗರವನ್ನು ಮಾಡದೇ ಇದ್ದರೆ ಉತ್ತರ ಕರ್ನಾಟಕದ ಅಭಿವೃದ್ಧಿಗೆ ಮಾರಕವಾಗುತ್ತದೆ, ಆರ್ಥಿಕ ಅಭಿವೃದ್ಧಿಗೂ ಸಹ ಮಾರಕವಾಗುತ್ತದೆ. ಆದುದರಿಂದ ದಯವಿಟ್ಟು ಸರ್ಕಾರ ಜವಳಿ ನಗರವನ್ನು ಮಾಡುವುದನ್ನು ಕೈಬಿಡುವುದಿಲ್ಲ ಮತ್ತು ಆದಷ್ಟು ಬೇಗ ಸ್ಥಾಪನೆ ಮಾಡುತ್ತೇವೆಂಬ ಒಂದು ಸ್ಪಷ್ಟ ಭರವಸೆಯನ್ನು ಕೊಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಎಸ್.ಪಾಟೀಲ್: ಸನ್ಮಾನ್ಯ ಅಧ್ಯಕ್ಷರೇ, ಹುಬ್ಬಳ್ಳಿಯಲ್ಲಿ ಜವಳಿ ನಗರವನ್ನು ಮಾಡಬೇಕೆಂಬ ವಿಚಾರ ಸರ್ಕಾರದ ಮುಂದೆ ಇದ್ದು ಇದನ್ನು ಮಾಡುವುದಕ್ಕೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

(ಉ) ಮಹದೇವ ಜವಳಿ ಮಿಲ್ ಮುಚ್ಚದೇ ಇರಲು ಕ್ರಮ.

ಶ್ರೀ ಅಶೋಕ್ ಕಾಟ್ವೆ (ಹುಬ್ಬಳ್ಳಿ): ಮಾನ್ಯ ಅಧ್ಯಕ್ಷರೆ, ಮಹದೇವ ಜವಳಿ ಮಿಲ್, ಉತ್ತರ ಕರ್ನಾಟಕದಲ್ಲಿ ಸುಮಾರು 100 ವರ್ಷಗಳ ಹಿಂದೆ ಸ್ಥಾಪನೆಯಾಗಿರತಕ್ಕಂತಹ ಒಂದು ದೊಡ್ಡ ಮಿಲ್ ಆಗಿದೆ. ಧಾರವಾಡ ಜಿಲ್ಲೆ, ಬೆಳಗಾಂ ಜಿಲ್ಲೆ, ರಾಯಚೂರು ಜಿಲ್ಲೆ, ಈ ಭಾಗದಲ್ಲಿ ಬೆಳೆಯತಕ್ಕಂತಹ ಹತ್ತಿಯನ್ನು ಉಪಯೋಗ ಮಾಡುವುದಕ್ಕೆ ಈ ಮಿಲ್‌ನ್ನು ತೆರೆಯಲಾಗಿತ್ತು. ಈಗ ಆ ಮಿಲ್ಲನ್ನು ಮುಚ್ಚುವುದರಿಂದ ನೂರಾರು ಕಾರ್ಮಿಕರು ಬೀದಿ ಪಾಲಾಗುತ್ತಿದ್ದಾರೆ. ಆದುದರಿಂದ ಸರ್ಕಾರ ಆ ಮಿಲ್‌ನ್ನು ಮುಚ್ಚಬೇಕೆಂದು ಏನು ಕ್ರಮವನ್ನು ತೆಗೆದುಕೊಂಡಿರುತ್ತೀರಿ ಆ ನಿರ್ಧಾರವನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು. ಆ ಮಿಲ್‌ಗೆ ಹುಬ್ಬಳ್ಳಿ ನಗರದ ಮಧ್ಯ ಭಾಗದಲ್ಲಿ 45 ಎಕರೆ ಜಮೀನು ಇರುವುದರಿಂದ, ಆ 45 ಎಕರೆ ಜಮೀನಿನ ಮೌಲ್ಯ ನೂರಾರು ಕೋಟಿ ರೂಪಾಯಿಗಳಾಗುತ್ತದೆ. ಈಗ 45 ಎಕರೆ ಜಮೀನಿನಲ್ಲಿ ಅರ್ಧ ಭಾಗ ಜಮೀನನ್ನು ಮಾರಿ ಅದನ್ನು ಮತ್ತೆ ಪುನಶ್ಚೇತನಗೊಳಿಸಿದರೆ ಹೆಚ್ಚಿನ ಹೊಸ ಯಂತ್ರಗಳನ್ನು ಆ ಮಿಲ್‌ನಲ್ಲಿ ಹಾಕಿ ಬಳಸಿದ್ದೇ ಆದರೆ ಆ ಭಾಗಗಳಲ್ಲಿ ರೈತರು ಬೆಳೆಯುವಂತಹ ಹತ್ತಿಗೆ ಯೋಗ್ಯ ಬೆಲೆಯೂ ಸಹ ಸಿಗುವುದು; ಎರಡನೆಯದಾಗಿ ಅಲ್ಲಿ ಕೆಲಸಕ್ಕೆ ಇರುವಂತಹ ಕಾರ್ಮಿಕರನ್ನೂ ಸಹ ಉಳಿಸಬಹುದೆಂದು ಸರ್ಕಾರಕ್ಕೆ ಸಲಹೆಯನ್ನು ಕೊಡುತ್ತಿದ್ದೇನೆ. ಈ ಮಿಲ್‌ನ್ನು ಮುಚ್ಚದೇ ಯೋಗ್ಯ ಕ್ರಮವನ್ನು ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದಂತಹ ಮಿಲ್ ಅದು ಮೊದಲು ಸಹಕಾರಿ ಗಿರಣಿಯಾಗಿತ್ತು, ತದನಂತರ ಅದನ್ನು ಮುಚ್ಚುವಂತಹ ಪ್ರಸಂಗ ಬಂದಿದ್ದಾಗ ಸರ್ಕಾರ ಅದನ್ನು ತೆಗೆದುಕೊಂಡಿತ್ತು, ನಂತರ ಅದನ್ನು ಬೇರೆಯವರಿಗೆ ಕೊಟ್ಟಿತ್ತು. ಹೀಗಾಗಿ ಹಿಂದೆ ಇದ್ದಂತಹ ಸರ್ಕಾರ ಮತ್ತು ನಮ್ಮ ಸರ್ಕಾರ ಪ್ರಯತ್ನವನ್ನು ಮಾಡಿದ್ದರೂ ಕೂಡ ಅದು ಲಾಭದಾಯಕವಾಗುವಂತಹ ಸ್ಥಿತಿಗೆ